# ಜಕಾನದ ಬೆನ್ನು ಹತ್ತಿ..

**ಈ ಹೆಣ್ಣು ಹಕ್ಕಿಗಳು ಬಹುಪತಿತ್ವ ಪಾಲಿಸುತ್ತವೆ. ಮೊಟ್ಟೆ ಇಟ್ಟ ಬಳಿಕ ಗಂಡು ಹಕ್ಕಿಯನ್ನು ಮೊಟ್ಟೆಗೆ ಕಾವು ಕೊಡಲು ಗೂಡಿನಲ್ಲಿ ಬಿಟ್ಟು, ಬೇರೆ ಬಾಯ್‌ಫ್ರೆಂಡ್‌ಗಳನ್ನು ಹುಡುಕಿಕೊಳ್ಳುತ್ತವೆ!**

ಚಿತ್ರ ಬರಹ:
**ಪುಟ್ಟರಾಜು ಕೈಗಾ**




ಮುಂಗಾರು ಮಳೆ ಹೊಡೆಯತೊಡಗಿದೆ. ಜೌಗು ಪ್ರದೇಶಗಳಲ್ಲಿ ನೀರು ತುಂಬಿ ಜೀವಕಳೆ ತುಳುಕುತ್ತಿದೆ. ಜೌಗು ಪ್ರದೇಶದಲ್ಲಿ ಜಲ ಸಸ್ಯಗಳು ಹುಲುಸಾಗಿ ಬೆಳೆದು, ಮುಳುಗುಳುಕ, ಬಾತುಕೋಳಿ, ಬೆಳ್ಳಕ್ಕಿ, ದೇವನಕ್ಕಿ, ಬಕ ಇತ್ಯಾದಿ ಪಕ್ಷಿಗಳಿಗೆ ಸಂತಾನೋತ್ಪತ್ತಿಯ ತಾಣ ಸಿದ್ಧವಾಗತೊಡಗಿದೆ. ಇಂಗ್ಲಿಷ್‌ನಲ್ಲಿ ಈ ಜೌಗು ಪ್ರದೇಶವನ್ನು 'ಪಿಟ್ ಲ್ಯಾಂಡ್' ಎನ್ನುತ್ತಾರೆ. ಜಗತ್ತಿನಾದ್ಯಂತ ಇತ್ತೀಚೆಗೆ 'ಸೇವ್ ಪಿಟ್‌ಲ್ಯಾಂಡ್' ಚಳವಳಿಯೂ ಬಲಗೊಳ್ಳುತ್ತಿದೆ.

ಜಕಾನ ಎಂಬ ಈ ಹಕ್ಕಿಗೆ ಅದ್ಯಾರು ಜೌಗು ಪ್ರದೇಶದಲ್ಲಿ ಜೀವಕಳೆ ತುಂಬಿದೆ ಎಂಬ ಸುದ್ದಿ ಕೊಡುತ್ತಾರೋ ಗೊತ್ತಿಲ್ಲ! ಮುಂಗಾರು ಮಳೆ ಬಿದ್ದ ತಕ್ಷಣ ಹಾಜರ್. ನೈದಿಲೆ, ಕೆಂದಾವರೆ, ಜೊಂಡು ಹುಲ್ಲುಗಳಿಂದ ಆವೃತವಾದ ನೀರಿನ ತಾಣದಲ್ಲಿ ವಾಸಿಸುವ 'ಜಕಾನ' ಹಕ್ಕಿಯನ್ನು ಅಚ್ಚಕನ್ನಡದಲ್ಲಿ ದೇವನಕ್ಕಿಗಳೆಂದು ಕರೆಯುತ್ತಾರೆ. ಜೌಗು ನೆಲದಲ್ಲಿ, ಎಲೆ ಸಸ್ಯಗಳ ನಡುವೆ ಲೀಲಾಜಾಲ ಹೆಜ್ಜೆ ಹಾಕುವ ಈ ಹಕ್ಕಿಗೆ 'ತಾವರೆ ಹಕ್ಕಿ', 'ಎಲೆ ನಡಿಗೆ ಜಲಪಕ್ಷಿ' ಎನ್ನುವ ಹೆಸರುಗಳೂ ಇವೆ.

ಥೇಟ್ ಜೇಡದ ಕಾಲುಗಳಂತೆ ಕಾಣುವ ಇವುಗಳ ನೀಳವಾದ ವಿಸ್ತೃತ ಪಾದ,

**(8ನೇ ಪುಟ ನೋಡಿ)**